471(656) ಶ್ರೀ ಸರಿಕಾರ್ ಬೀಮಪ್ಪ ಚೆನ್ನಪ್ಪ (ರಾಯಭಾಗ) ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರೆಂದು ಸುಳ್ಳು ಜಾತಿ ಪ್ರಮಾಣ ಪತ್ರ ತೆಗೆದುಕೂಂಡು ಸರ್ಕಾರಿ ಸೇವೆಗೆ ಸೇರಿರುವ ನೌಕರರೆಷ್ಟು;

ಆ) ಸರ್ಕಾರ ಇದರ ಬಗ್ಗೆ ವಿಚಾರಣೆ ನಡೆಸಿದೆಯೇ;

ಇ) ನಡೆಸಿದ್ದಲ್ಲಿ, ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳದಿರುವುದಕ್ಕೆ ಕಾರಣವೇನು;

ಈ) ಎಷ್ಟು ದಿನಗಳೂಳಗೆ ಕ್ರಮ ತೆಗೆದುಕೊಳ್ಳಲಾಗುವುದು

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) 1996 ರಿಂದ 2004ರ ಡಿಸೆಂಬರ್ ವರೆಗೆ ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ಪಡೆದು ಸರ್ಕಾರಿ ಸೇವೆಗೆ ಸೇರಿರುವ ಒಟ್ಟು ನೌಕರರ ಸಂಖ್ಯೆ 810

ಆ) ಹೌದು ನಾಗರಿಕ ಹಕ್ಕು ನಿರ್ದೇಶನಾಲಯದಿಂದ ವಿಚಾರಣೆ ನಡೆಸಲಾಗುತ್ತಿದೆ.

ಇ) ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ.

ಈ) ಗೆ ಉತ್ತರ ನೀಡಿದ್ದರಿಂದ ಅನ್ವಯಿಸುವುದಿಲ್ಲ.

472(919) ಶ್ರೀ ಬಿ.ಕೆ.ಸಂಗಮೇಶ್ವರ ಮಾನ್ಯ ಬಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕಾ ಹಾಗೂ ಮೂಲಭೂತ ಸೌಲಭ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭದ್ರಾವತಿಯ ಮೈಸೂರು ಕಾಗದ ಕಾರ್ಖಾನೆ ಖಾಸಗಿಯವರಿಗೆ ವಹಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ;

ಆ) ಕಾರ್ಖಾನೆಯ ಪುನಶ್ಚೇತನಕ್ಕಾಗಿ 2004–05ನೇ ಸಾಲಿನಲ್ಲಿ ಹೂಡಲಾಗುವ ಬಂಡವಾಳದ ಮೊಬಲಗು ಎಷ್ಟು; ಆಡಳಿತ ವರ್ಗವು ಸಲ್ಲಿಸಿರುವ ಕ್ರಿಯಾಯೋಜನೆಗಳಾವುವು;

ಇ) 2001–02; 2002–03; 2003–04ನೇ ಸಾಲಿನಲ್ಲಿ ಈ ಕಾಖಾನೆಯ ಲಾಭ/ನಷ್ಟ ಎಷ್ಟು;

ಈ) ಎಂ.ಪಿ.ಎಂ. ಕಾರ್ಖಾನೆಯ ಅಧಿಕಾರಿಗಳು ವಿವಿಧ ಘಟಕಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಮತ್ತು ಗುತ್ತಿಗೆ ಕಾರ್ಮಿಕರ ಸಂಖ್ಯೆ ಎಷ್ಟು;

ಉ) ಕಳೆದ 3 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವ ಗುತ್ತಿಗೆ ಕಾರ್ಮಿಕರ ಸಂಖ್ಯೆ ಎಷ್ಟು ಹಾಗೂ ಆ ಪೈಕಿ ಖಾಯಂಗೊಳಿಸಿರುವ ಮತ್ತು ಖಾಯಂಗೊಳಿಸಲು ಬಾಕಿ ಇರುವ ಗುತ್ತಿಗೆ ಕಾರ್ಮಿಕರ ಸಂಖ್ಯೆ ಎಷ್ಟು;

ಊ) ಗುತ್ತಿಗೆ ಕಾರ್ಮಿಕರನ್ನು ಖಾಯಂಗೊಳಿಸಲು ಆಡಳಿತ ವರ್ಗದವರು ಕೈಗೊಂಡಿರುವ ಕ್ರಿಯಾ ಯೋಜನೆ ಏನು?

ಶ್ರೀ ಪಿ.ಜಿ. ಆರ್. ಸಿಂಧ್ಯ (ಬಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕಾ ಹಾಗೂ ಮೂಲಭೂತ ಸೌಲಭ್ಯ ಸಚಿವರು) :

ಸಿಐ 14 ಸಿಪಿಎಂ 2005

ಅ) ರೋಗಗ್ರಸ್ಥ ಕೈಗಾರಿಕೆಗಳ ಅಧಿನಿಯಮದ ಪ್ರಕಾರ ಕಂಪನಿಯು ರೋಗಗ್ರಸ್ಥವಾಗುವ ಅಂಚಿನಲ್ಲಿರುವ ಹಿನ್ನೆಲೆಯಲ್ಲಿ ಕಂಪನಿಯ ಪುನಶ್ಚೇತನಕ್ಕಾಗಿ ಸರ್ಕಾರವು ವಿವಿಧ ಪರ್ಯಾಯಗಳನ್ನು ಪರಿಶೀಲಿಸುತ್ತಿದ್ದು ಖಾಸಗಿಕರಣವು ಅಂತಹ ಪರ್ಯಾಯಗಳಲ್ಲೊಂದಾಗಿರುತ್ತದೆ.

ಆ) ಯಾವುದು ಇಲ್ಲ. ಆದರೆ ಬಂಡವಾಳ ಹೂಡಿಕೆಗೆ ಕೆಲವು ಕ್ಷೇತ್ರಗಳನ್ನು ಪರಿಗಣಿಸುವಲ್ಲಿ ಅದನ್ನು ಗಮನದಲ್ಲಿಟ್ಟುಕೊಳ್ಳುವುದು.

ಇ) ಕಂಪನಿಯು ಅನುಭವಿಸುತ್ತಿರುವ ನಷ್ಟದ ವಿವರ ಕೆಳಗಿನಂತಿದೆ:

ವರ್ಷ	ರೂ. ಲಕ್ಷಗಳಲ್ಲಿ
2001–02	3486.22
2002–03	2085.60
2003–04	978.15

ಈ) ಅಧಿಕಾರಿಗಳು – 271

ಗುತ್ತಿಗೆ ಕಾರ್ಮಿಕರು – 1530

ಉ)

ವರ್ಷ	ನೌಕರರ ಸಂಖ್ಯೆ
2002–03	1588
2003–04	1574
2004–05	1530

ಆ ಮೂರು ವರ್ಷಗಳಲ್ಲಿ ಕಂಪನಿಯು ಯಾವುದೇ ಗುತ್ತಿಗೆ ಕಾರ್ಮಿಕರ ಸೇವೆಯನ್ನು ಖಾಯಂ ಗೊಳಿಸಿರುವುದಿಲ್ಲ.

ಊ) ಕಂಪನಿಯು ಗುತ್ತಿಗೆ ಆಧಾರಿತ ಉದ್ಯೋಗಿಯ ಸೇವೆಯನ್ನು ಸಕ್ರಮಗೊಳಿಸುವ ಸ್ಥಿತಿಯಲ್ಲಿರುವುದಿಲ್ಲ.

473(1116)ಶ್ರೀ ಶಂಕರಲಿಂಗೇಗೌಡ. ಹೆಚ್.ಎನ್. ವಿಧಾನ ಸಭಾ ಸದಸ್ಯರು(ಚಾಮರಾಜ) ಮಾನ್ಯ ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ಜಿಲ್ಲೆಯಲ್ಲಿರುವ ಭಾರಿ ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳನ್ನು ಹಾಗೂ ಅಲ್ಲಿರುವ ಕಾರ್ಮಿಕರುಗಳ ಸಂಖ್ಯೆ ಎಷ್ಟು(ವಿವರ ನೀಡುವುದು)

ಆ) ಸದರಿ ಕೈಗಾರಿಕೆಗಳಲ್ಲಿ ತಯಾರಿಸಲಾಗುತ್ತಿರುವ ಉತ್ಪನ್ನಗಳಾವುವು(ವಿವರ ನೀಡುವುದು)

ಇ) ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯ ಉದಗಿಸಲಾಗಿದೆಯೇ?(ವಿವರ ನೀಡುವುದು)

ಶ್ರೀ ಪಿ.ಜಿ.ಆರ್.ಸಿಂಧ್ಯ(ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು) :

ಅ) ಮೈಸೂರು ಜಿಲ್ಲೆಯಲ್ಲಿರುವ ಭಾರಿ ಮಧ್ಯಮ ಹಾಗೂ ಕಾರ್ಮಿಕರುಗಳು ವಿವರ ಕೆಳಕಂಡಂತೆ ಇರುತ್ತದೆ.